‘ರಾತ್ರಿ ಹತ್ತು ಗಂಟೆಗೆ ಸರ್...’

‘ನಿನ್ನೆ ರಾತ್ರಿ ಕಳೆದು ಹೋಗಿದ್ದಾಳೆ ಅಂತೀರಾ, ಈಗ ಬೆಳಗ್ಗೆ ಏಳು ಗಂಟೆ, ಈಗ ಬಂದಿದ್ದೀರಲ್ಲ?’ ಸ್ವಲ್ಪ ಅಸಹನೆಯಿಂದಲೇ ಕೇಳಿದ. ಅವನ ಹದಿನೈದು ವರ್ಷದ ಪೊಲೀಸ್ ಅನುಭವದಲ್ಲಿ ಈ ರೀತಿಯ ಅನೇಕ ಕೇಸ್‌ಗಳನ್ನ ನೋಡಿದ್ದ. ಬಹಳಷ್ಟು ಕೇಸ್‌ಗಳಲ್ಲಿ ಮನೆಯವರು, ಬಂಧುಗಳು ಹಾಗೂ ಸ್ನೇಹಿತರೊಡನೆ ತಾವೇ ಹುಡುಕಲು ಪ್ರಯತ್ನಿಸುತ್ತಾರೆ. ಮೊದಲೇ ಪೊಲೀಸರಿಗೆ ತಿಳಿಸಿದರೆ ಅವರು ತಮ್ಮ ಸಂಪನ್ಮೂಲ, ಸಂಪರ್ಕಗಳನ್ನೆಲ್ಲಾ ಉಪಯೋಗಿಸಿಕೊಂಡು ಹಿಡಿಯುತ್ತಾರೆ. ಕಷ್ಟ ಆಗದು. ಆದರೆ ಹೀಗೆ ಮಾಡಲು ಎಲ್ಲರಿಗೂ ಒಂದೇ ಭಯ! ಪೊಲೀಸರ ಬಳಿ ಹೋದರೆ ತಮ್ಮ ಮರ್ಯಾದೆ ಹಾಳಾಗುತ್ತದೆ ಎಂಬುದು.

ಪೂಜಾರಿಯ ಪ್ರಶ್ನೆಗೆ ಇಬ್ಬರೂ ಉತ್ತರಿಸಲಿಲ್ಲ.

‘ಏನಾದರೂ ಲವ್... ಬಾಯ್ ಫ್ರೆಂಡ್... ಮನೆಯಲ್ಲಿ ಜಗಳ... ಇತ್ಯಾದಿ?’

‘ಇಲ್ಲ ಸರ್, ಅವಳಿನ್ನೂ ಹದಿನಾರು ವರ್ಷದವಳು... ಅಂಥದ್ದೇನೂ ಇಲ್ಲ...’

‘ಅವಳ ಮೊಬೈಲ್ ನಂಬರ್ ಕೊಡಿ, ಟ್ರಾಕಿಂಗ್‌ಗೆ ಹಾಕೋಣ... ಕೊನೆಯದಾಗಿ ಯಾರಿಗೆ ಕರೆ ಮಾಡಿದ್ದಳು ಎನ್ನುವ ಸಂಗತಿಗಳೆಲ್ಲ ತಿಳಿಯಬಹುದು...’

‘ಅವಳ ಬಳಿ ಮೊಬೈಲ್ ಇಲ್ಲ ಸರ್’ ಒಂದೊಂದೇ ಶಬ್ದ ಬಿಡಿ ಬಿಡಿಸಿ ಹೇಳಿದಳು ಸುಮತಿ.

ಪೂಜಾರಿಗೆ ಆಶ್ಚರ್ಯವಾಯಿತು. ಈಗಿನ ಕಾಲದ ಮಕ್ಕಳು ಮೊಬೈಲ್ ಇಲ್ಲದೇ ಇರುವುದು... ಅದೂ ಹದಿನಾರು ವಯಸ್ಸಿನ ಹುಡುಗಿ! ‘ಇಂಪಾಸಿಬಲ್’ ಎಂದುಕೊಂಡ.

‘ದೂರು ದಾಖಲಿಸಿಕೊಳ್ಳುತ್ತೇವೆ, ಆ ಹುಡುಗಿಯ ವಿವರಗಳು, ಇದ್ದರೆ ಒಂದು ಫುಲ್ ಸೈಜ್ ಫೋಟೊ... ಇನ್ನಿತರೇ ವಿವರಗಳನ್ನು ಕೊಟ್ಟು ಹೋಗಿ, ನಮ್ಮ ಪ್ರಯತ್ನ ಮಾಡುತ್ತೇವೆ’ ಎಲ್ಲರಿಗೂ ಪೊಲೀಸರು ಹೇಳುವ ಶಬ್ದಗಳನ್ನೇ ಹೇಳಿದ.

‘ಸರ್, ಮಂಗಳಾನ ತಂದೆ ತಾಯಿಗೆ ಇನ್ನೂ ವಿಚಾರ ತಿಳಿಸಿಲ್ಲ. ದಯವಿಟ್ಟು ಬೇಗ ಪ್ರಯತ್ನ ಮಾಡಿ ಸರ್...’ ಸದಾನಂದನ ಮಾತಿನಲ್ಲಿ ದೈನ್ಯತೆ ತುಂಬಿತ್ತು.

ಆ ದಂಪತಿಯ ಮುಖ ನೋಡಿ ಪೂಜಾರಿಗೆ ಕಸಿವಿಸಿಯಾಯಿತು. ಹದಿನಾರು ವರ್ಷದ ಹುಡುಗಿ, ಕೈಯಲ್ಲಿ ಮೊಬೈಲ್ ಸಹಿತ ಇರದಷ್ಟು ಅಮಾಯಕಿ, ಏರಿಯಾಗೆ ಬಂದು ಇನ್ನೂ ಮೂರುದಿನ ಕೂಡಾ ಆಗಿಲ್ಲ, ಏಕಾಏಕಿ ಕಾಣೆಯಾಗಿರುವುದು... ಅದೂ ತನ್ನ ಅಕ್ಕನ ಮನೆಯಲ್ಲಿ ಇರುವಾಗ... ನಿಜಕ್ಕೂ ಆಘಾತಕಾರಿ ವಿಚಾರವೇ. ಅವಳ ತಂದೆ ತಾಯಿಗೆ ಏನು ಉತ್ತರ ಕೊಡುವುದು, ಆ ಎಳೆ ವಯಸ್ಸಿನ ಹುಡುಗಿಯನ್ನು ಹೊಸ ಜಾಗದಲ್ಲಿ ಹುಡುಕುವುದು ಹೇಗೆ? ಎಂಬೆಲ್ಲ ಪ್ರಶ್ನೆಗಳಿರುತ್ತವೆ ಎಂದು ಅವನಿಗೂ ತಿಳಿದಿತ್ತು. ಇಂಥ ಕೇಸ್‌ಗಳಲ್ಲಿ ಪ್ರೀತಿ–ಪ್ರೇಮ ಕಾಮನ್ ಆಗಿರುತ್ತದೆ. ಅದು ಪೋಷಕರಿಗೆ ತಿಳಿದಿರುವುದಿಲ್ಲ. ನೋಡಿದರಾಯಿತು ಎಂಬ ಭರವಸೆಯಿಂದ ಸದಾನಂದನಿಗೆ–

‘ಭಯಪಡಬೇಡಿ ಸದಾನಂದ... ನಮ್ಮ ಪೂರ್ಣ ಪ್ರಯತ್ನ ಮಾಡುತ್ತೇವೆ. ನನಗೇನೋ ಇದು ಕಿಡ್ನಾಪ್ ಕೇಸ್ ಅಲ್ಲ ಅನಿಸುತ್ತದೆ... ಆದರೂ ಯಾರಾದರೂ ಹಣದ ಬೇಡಿಕೆ ಇಟ್ಟು ಫೋನ್ ಮಾಡಿದರೆ ದಯವಿಟ್ಟು ನಮಗೆ ತಿಳಿಸಿ’ ಎಂದ.

ಸದಾನಂದ ಹೋದ ಸ್ವಲ್ಪ ಸಮಯದ ನಂತರ ಪೂಜಾರಿ, ಜಗದೀಶನನ್ನು ಕರೆದು ಕೇಸ್‌ನ ವಿವರಗಳನ್ನು ಹೇಳಿ, ‘ಮೊದಲು ಅವರ ಮನೆಯ ಬಳಿ ಹೋಗಿ ವಿಚಾರಿಸು, ಅಕ್ಕ ಪಕ್ಕದವರನ್ನು ಮಾತಿಗೆಳೆದು ಏನಾದರೂ ವಿಚಾರ ತಿಳಿಯುತ್ತಾ ನೋಡು. ಕಳೆದೆರಡು ದಿನಗಳಿಂದ ಆ ಏರಿಯಾದಲ್ಲಿ ಯಾರಾದರೂ ಅಪರಿಚಿತರು ಬರುತ್ತಿದ್ದರಾ ಎಂದೂ ವಿಚಾರಿಸು. ಆ ಐಸ್‌ಕ್ರೀಮ್